Online Newspaper Clipping Service
**Dtd- Thursday, 12th, April- 2018**

ಪ್ರಜಾವಾಣಿ

**Page No. 02**



ನಂಗಲಿ ಸಮೀಪದ ಯಲುವಹಳ್ಳಿಯಲ್ಲಿ ನಡೆದ ಉಚಿತ ಆರೋಗ್ಯ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು

# ಆರೋಗ್ಯ ತಪಾಸಣಾ ಶಿಬಿರ

ನಂಗಲಿ: ಇಲ್ಲಿನ ಯಲುವಹಳ್ಳಿಯ ಸುಭಾಶ್ ಚಂದ್ರಬೋಸ್ ಶಾಲೆಯಲ್ಲಿ ಆರ್.ಎಲ್ ಜಾಲಪ್ಪ ಆಸ್ಪತ್ರೆ, ರೋಟರಿ ಬ್ರಿಗೇಡ್ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಬುಧವಾರ ಬೇಸಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಶಿಬಿರದಲ್ಲಿ ಒಟ್ಟು 150 ರೋಗಿಗಳು ತಪಾಸಣೆ ಮಾಡಿಸಿಕೊಂಡರು. ಕೆಲವು ಸಣ್ಣ ಪುಟ್ಟ ಖಾಯಿಲೆಗಳಿಗೆ ಸ್ಥಳದಲ್ಲಿಯೇ ಔಷಧ ನೀಡಲಾಯಿತು. ಗಂಭೀರ ಕಾಯಿಲೆಗಳಿಗೆ ಒಳಪಟ್ಟ 25 ಮಂದಿಯನ್ನು ಆರ್.ಎಲ್ ಜಾಲಪ್ಪ ಆಸ್ಪತ್ರೆಗೆ ತಪಾಸಣೆಗಾಗಿ ಕಳುಹಿಸಿಕೊಡಲಾಯಿತು.

ವೈದ್ಯರಾದ ಅಮಲ್, ಅರ್ಶಿತಾ, ಅಜಯ, ಮನು ಮತ್ತು ಜಾಳಪ್ಪ ಆಸ್ಪತ್ರೆಯ ಅಧಿಕಾರಿ ವಿಷ್ಣುಚಿತ ಇದ್ದರು.

ಕೋಲಾರ ಪ್ರಭ

# ಉಚಿತ ಆರೋಗ್ಯ ತಪಾಸಣಾ ಶಿಬಿರ



ಮುಳಬಾಗಿಲು : ತಾಲ್ಲೂಕಿನ ಯಲುವಹಳ್ಳಿಯ ಸುಭಾಶ್ ಚಂದ್ರಬೋಸ್ ಶಾಲೆಯಲ್ಲಿ ಆರ್.ಎಲ್ ಜಾಲಪ್ಪ ಆಸ್ಪತ್ರೆ, ರೋಟರಿ ಬ್ರಿಗೇಡ್ ಬೆಂಗಳೂರು ಮತ್ತು ಶಾಲೆಯವರ ಸಂಯುಕ್ತಾಶ್ರಯದಲ್ಲಿ ಬುಧವಾರ ಬೇಸಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ಸುತ್ತ ಮುತ್ತಲ ಗ್ರಾಮಗಳ ರೋಗಿಗಳು ಮತ್ತು ಆಂಧ್ರ ಪ್ರದೇಶದ ಗಡಿ ಅಂಚಿನಲ್ಲಿರುವ ಆಲಕುಪ್ಪ, ಗಂಡ್ರಾಜಪಲ್ಲಿ, ಕುರುಪಲ್ಲಿ ಮತ್ತು ಉಗಿಣಿ ಮುಂತಾದ ಗ್ರಾಮಗಳಿಂದ ಬಂದಿದ್ದ ರೋಗಿಗಳು ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಂಡರು. ಎಲ್ಲಾ ರೋಗಿಗಳನ್ನು ಕೋಲಾರ ಜಾಲಪ್ಪ ಮತ್ತು ಬೆಂಗಳೂರಿನಿಂದ ಆಗಮಿಸಿದ್ದ ವಿವಿಧ ವಿಭಾಗಗಳಲ್ಲಿ ಪರಿಣಿತರಾದ ವೈದ್ಯರು ರೋಗಿಗಳನ್ನು ತಪಾಸಣೆ ಮಾಡಿದರು.

ಶಿಬಿರದಲ್ಲಿ ಒಟ್ಟು 150 ರೋಗಿಗಳು ಬಂದು ಕ್ಯಾನ್ಸರ್, ಕಣ್ಣಿನ ಸಮಸ್ಯೆಗಳು, ಹೃದಯ ಸಮಸ್ಯೆ, ಅಪೆಟಿಡಿಕ್ಸ್,ಬಿಪಿ, ಸಕ್ಕರೆ ಖಾಯಿಲೆ ಮುಂತಾದ ಸಮಸ್ಯೆಗಳನ್ನು ರೋಗಗಳಿಗೆ ಪರೀಕ್ಷೆ ಮಾಡಿಸಿಕೊಂಡರು. ಕೆಲವು ಸಣ್ಣ ಪುಟ್ಟ ಖಾಯಿಲೆಗಳಿಗೆ ಸ್ಥಳದಲ್ಲಿಯೇ ಔಷಧಿಯನ್ನು ನೀಡಲಾಯಿತು. ಮತ್ತು ಗಂಬೀರ ಕಾಯಿಲೆಗಳುಳ್ಳ 25 ಮಂದಿಯನ್ನು ಆರ್.ಎಲ್ ಜಾಲಪ್ಪ ಆಸ್ಪತ್ರೆಗೆ ತಪಾಸಣೆ ಮತ್ತು ಔಷಧೋಪಚಾರಕ್ಕಾಗಿ ಕಳುಹಿಸಿಕೊಡಲಾಯಿತು.

ಶಿಬಿರದ ಆಯೋಜಕರಾದ ಕೃಷ್ಣಪ್ಪ ತಪಾಸಣೆಗೆ ಬಂದಿದ್ದ ರೋಗಿಗಳಿಗೆ ಬೇಸಿಗೆ ಕಾಲದಲ್ಲಿ ಕಾಯಿಲೆಗಳು ಹರಡುವ ಸಮಸ್ಯೆ ಹೆಚ್ಚಿರುವ್ಯದರಿಂದ ಮುಂಜಾಗ್ರತಾ ಕ್ರಮವಾಗಿ ಖಾಯಿಲೆಗಳು ಹರಡದೆ ಇರಲು ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ವೈದ್ಯರಾದ ಅಮಲ್, ಅರ್ಶಿತ, ಅಜಯ, ಮನು ಮತ್ತು ಶಿಬಿರದ ಜಾಳಪ್ಪ ಆಸ್ಪತ್ರೆಯ ಅಧಿಕಾರಿ ವಿಷ್ಣುಚಿತ ಮುಂತಾದವರು ಉಪಸ್ಥಿತರಿದ್ದರು.